International Journal of Kannada Research 2022; 8(4): 115-117

International Journal of Kannada Research
www.kannadajournal.com

ISSN: 2454–5813
IJKR 2022; 8(4): 115-117
© 2022 IJKR
www.kannadajournal.com
Received: 08-09-2022
Accepted: 11-10-2022

**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

Corresponding Author:
**ಡಾ. ಎಚ್. ಎಂ. ಮಹೇಶ್**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ಪತ್ರಗಳು-ಚಿತ್ರಗಳು: ಒಂದು ಅವಲೋಕನ

**ಡಾ. ಎಚ್. ಎಂ. ಮಹೇಶ್**

## ಪೀಠಿಕೆ

ಪ್ರಾಚೀನ ಕಾಲದಿಂದಲೂ ಸಂವಹನ ಮಾಧ್ಯಮವಾಗಿದ್ದ ‘ಪತ್ರಗಳು’ ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಪಡೆದಿವೆ. ಇವು ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಲ್ಲದಿದ್ದರೂ ಮಾನವ ಸಂಬಂಧ, ಸಂವಹನ ಮತ್ತು ಪರಂಪರೆಯ ದೃಷ್ಟಿಯಿಂದ ವಾಚಕರ ಗಮನ ಸೆಳೆಯುತ್ತವೆ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ದಾಪುಗಾಲು ಹಾಕುತ್ತಿರುವ ಮಾನವ ಸಮಾಜ ಬಂದ ದಾರಿಯನ್ನೊಮ್ಮೆ ಹಿಂದಿರುಗಿ ನೋಡುವಂತೆ, ಅಂಥ ದಿನಗಳನ್ನು ನೆನಪಿಸಿಕೊಳ್ಳುವಂತೆ ಪತ್ರ ಸಾಹಿತ್ಯ ಮಾಡಿದೆ. ಮನುಷ್ಯ ಮನುಷ್ಯರ ನಡುವೆ ಮುಖಾಮುಖಿ ಸಾಧ್ಯವಾಗದಿದ್ದಾಗ ಸಂವಹನ ಕ್ರಿಯೆ ನಾನಾ ರೂಪದಲ್ಲಿ ನಡೆಯುತ್ತದೆ. ಆಧುನಿಕ ಯುಗದಲ್ಲಿ ದೂರವಾಣಿ, ಮೊಬೈಲ್, ಎಸ್.ಎಂ.ಎಸ್., ಇ-ಮೇಲ್, ವಾಟ್ಸ್‌ಪ್ ಮೊದಲಾದವು ಸಂವಹನ ಕಾರ್ಯವನ್ನು ತ್ವರಿತವಾಗಿ, ಪರಿಣಾಮಕಾರಿಯಾಗಿ, ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಆದರೆ ಇವೆಲ್ಲವುಕ್ಕಿಂತ ಪ್ರಾಚೀನವಾದದ್ದು, ಹಿರಿದಾದ್ದು ಮತ್ತು ಐತಿಹಾಸಿಕ ಮಹತ್ವವುಳ್ಳ ಮಾಧ್ಯಮವೆಂದರೆ ಕೈ ಬರಹದ ಪತ್ರಗಳು. ಮಾನವ ಸಂಬಂಧವನ್ನು ಬೆಸೆಯುವ, ಗಟ್ಟಿಗೊಳಿಸುವ, ಪ್ರೀತಿ ವಿಶ್ವಾಸಗಳನ್ನು ತುಂಬುವ, ಸಂತಸ ಸಮಾಧಾನವನ್ನು ಒದಗಿಸುವ, ಬದುಕಿನ ದಿಕ್ಕುದೆಸೆಗಳನ್ನು ತೋರಿಸುವ, ವ್ಯವಹಾರ ಕುದುರಿಸುವ ಕೆಲಸವನ್ನು ಪತ್ರಗಳು ಮಾಡಿವೆ.

ಪತ್ರಗಳು ಸಂದೇಶ ವಾಹಕಗಳು. ಮನುಷ್ಯ ಭಾಷೆಯನ್ನು ಕಲಿತದ್ದು ಒಂದು ಅಚ್ಚರಿ. ಬರಹವನ್ನು ಕಲಿತದ್ದು ಕ್ರಾಂತಿ. ಇಂಥ ಬರಹಗಳು ಪರಿಣಾಮಕಾರಿಯಾಗಿ ಬಳಕೆಯಾದಾಗ ಭಾಷಾಬಳಕೆಯ ಭಾಗವಾಗಿ ‘ಪತ್ರಗಳು’ ಕಾಣಿಸಿಕೊಂಡವು. ಇದರಿಂದ ಒಬ್ಬರ ಭಾವನೆಗಳನ್ನು ದಾಖಲಿಸಿ ಮತ್ತೊಬ್ಬರಿಗೆ ಕಳುಹಿಸಲು ಸಾಧ್ಯವಾಯಿತು. ಸಂದೇಶ ವಾಹಕಗಳ ರವಾನೆಗೆ ಪೌರಾಣಿಕ ಮಹತ್ವವಿದೆ. ಕಾಳಿದಾಸನ ‘ಮೇಘ ಸಂದೇಶ’ದಲ್ಲಿ ಭಾವನೆಗಳ ವಿನಿಮಯ ಮೋಡಗಳ ಮೂಲಕ ನಡೆದಿರುವ ಚಿತ್ರಣವಿದೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಬರುವ ಚಂದ್ರಹಾಸನ ಕಥೆಯಲ್ಲಿ ಪತ್ರದ ಅವಾಂತರವಿದೆ. ಆಧುನಿಕವಾಗಿ ಬಳಕೆಯಾಗುತ್ತಿರುವ ಅಂಚೆ ಎನ್ನುವ ಶಬ್ಧ ಹಂಸ ಎನ್ನುವ ಅರ್ಥವನ್ನು ಹೊಂದಿದ್ದು, ಅನಾದಿ ಕಾಲದಲ್ಲಿ ಹಂಸಗಳ ಮೂಲಕ ಪತ್ರ ರವಾನೆಯಾಗುತ್ತಿತ್ತು ಎಂದು ನಂಬಲಾಗಿದೆ. ಹೀಗೆ ಪುರಾಣ ಮತ್ತು ಐತಿಹಾಸಿಕ ಮಹತ್ವ ಪಡೆದಿರುವ ಪತ್ರಗಳು ಕ್ಷೇಮ ಸಮಾಚಾರ, ಪ್ರೀತಿ, ಪ್ರೇಮ, ವ್ಯವಹಾರ, ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಬ್ರಿಟೀಷರ ಆಗಮನದೊಂದಿಗೆ ಭಾರತದಲ್ಲಿ ಉಂಟಾದ ಬದಲಾವಣೆಗಳಲ್ಲಿ ಅಂಚೆ ವ್ಯವಸ್ಥೆ ಕೂಡ ಒಂದು. ಬಹುಷಃ ಪತ್ರ ರವಾನೆಗೆ ಒಂದು ನೆಲೆಯನ್ನು ಕಂಡುಕೊಂಡದ್ದು ಆ ಸಂದರ್ಭದಲ್ಲಿಯೇ. ಪೌರಾಣಿಕವಾಗಿ ಅಮೂರ್ತವಾಗಿದ್ದ ಸಂದೇಶವಾಹಕಗಳು ಐತಿಹಾಸಿಕವಾಗಿ ಮೂರ್ತ ರೂಪವನ್ನು ಪಡೆದದ್ದು ಗಮನಾರ್ಹ ಸಂಗತಿಯಾಗಿದೆ. ಊರಿನಿಂದ ಊರಿಗೆ ಸಾಗಿದ ಪತ್ರಗಳು ಮನೆ ಮನೆ ಬಾಗಿಲಿಗೆ ತಲುಪಿದವು. ಹೀಗೆ ಬರೆಯುತ್ತಿದ್ದ, ಕಳುಹಿಸುತ್ತಿದ್ದ ಮತ್ತು ಸ್ವೀಕರಿಸುತ್ತಿದ್ದ ಪತ್ರಗಳು ಒಂದು ರೀತಿಯಲ್ಲಿ ದಿನಪತ್ರಿಕೆಗಳ ಹಾಗೆ ಓದಿದ ನಂತರ ನಾಶವಾದದ್ದೇ ಹೆಚ್ಚು. ಅವುಗಳನ್ನು ಸಂರಕ್ಷಿಸಿ, ಸಂಸ್ಕರಿಸಿ ಅವುಗಳಿಗೆ ಸಾಂಸ್ಕೃತಿಕ, ಐತಿಹಾಸಿಕ ಮಹತ್ವವನ್ನು ತಂದುಕೊಡುವ ಕೆಲಸವಾದದ್ದು ವಿರಳ. ಪರಂಪರೆಯ ದೃಷ್ಟಿಯಿಂದ ಅಮೂಲ್ಯ ದಾಖಲೆಗಳೆನಿಸಿರುವ ಪತ್ರಗಳನ್ನು ಒಂದೆಡೆ ಸೇರಿಸಿ, ಕೃತಿ ರೂಪದಲ್ಲಿ ಓದುಗರಿಗೆ ನೀಡುವ ಕೆಲಸ ಅಲ್ಲಲ್ಲಿ ನಡೆದಿದೆ.

“ಪತ್ರಗಳ ಮೂಲಕವೇ ದೇಶದ ನೇತಾರ, ಮಾಜಿ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಭಾರತದ ಒಂದು ಸಂಪೂರ್ಣ ಚಿತ್ರಣವನ್ನು ತಮ್ಮ ಪುತ್ರಿ ಇಂದಿರಾ ಪ್ರಿಯದರ್ಶಿನಿ (ಮಾಜಿ ಪ್ರಧಾನಿ ಇಂದಿರಾಗಾಂಧಿ)ಗೆ ಪರಿಚಯಿಸುತ್ತಾರೆ. ೧೯೩೦ ರಿಂದ ೧೯೩೩ರವರೆಗೆ ಅವರು ಬರೆದ ಪತ್ರಗಳ ಸಂಗ್ರಹಿತ ಕೃತಿಯೇ ‘ಗ್ಲಿಂಪ್ಸಸ್

ಆಫ್ ವರ್ಲ್ಡ್ ಹಿಸ್ಟರಿ’ ಒಂದು ಅದ್ಭುತ ಕೃತಿಯಾಗಿದೆ. ಮಗಳಿಗೆ ಭಾರತವನ್ನು ಪರಿಚಯಿಸುತ್ತಲೇ ಹಲವಾರು ವಿಷಯಗಳು ಇಲ್ಲಿ ಚರ್ಚಿತವಾಗಿವೆ. ಪತ್ರಗಳದ್ದೇ ಮತ್ತೊಂದು ಅದ್ಭುತ ಪುಸ್ತಕವೆಂದರೆ ‘ಸಿಲ್ವರ್ ಟಂಗ್ ಆಫ್ ಇಂಡಿಯಾ’ ಎಂಬ ಖ್ಯಾತಿಗೆ ಪಾತ್ರವಾಗಿದ್ದ ಆನರಬಲ್ ಶ್ರೀನಿವಾಸ ಶಾಸ್ತ್ರಿಯವರ ‘ಲೆಟರ್ಸ್ ಆಫ್ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿ’ ಕೃತಿ ಪತ್ರಗಳ ಸಂಗ್ರಹವೇ ಆಗಿ ಈ ಕೃತಿ ಒಂದು ವಿಶೇಷತೆ ಮೈಗೂಡಿಸಿಕೊಂಡಿದೆ.”[1] ಪತ್ರಗಳಿಗೆ ಸಂಬಂಧಪಟ್ಟ ಹಾಗೆ ಕನ್ನಡದಲ್ಲಿ ಗಮನ ಸೆಳೆದ ಕೃತಿ “ಪ್ರೊ.ಎ.ಎನ್.ಮೂರ್ತಿರಾಯರ ‘ಚಿತ್ರಗಳು ಪತ್ರಗಳು’ ಎಂಬ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ. ಹಾಗೂ ಇದೇ ರೀತಿಯಲ್ಲಿರುವ ಪ್ರೊ.ಎಂ.ರಾಮಚಂದ್ರ ಅವರು ಹೊರತಂದಿರುವ ‘ಸೇಡಿಯಾಪು ಕೃಷ್ಣಭಟ್ಟರ ಪತ್ರ ಸಂಕಲನ’ ರೂಪದ ಕೃತಿ. ತಮ್ಮ ಸಂಪರ್ಕ ಏರ್ಪಟ್ಟಿದ್ದಂಥ ಹಲವು ವ್ಯಕ್ತಿಗಳ ಬಗೆಗಿನ, ಸಮಕಾಲೀನ ಬೆಳವಣಿಗೆಗಳ ಹಾಗೂ ಮಹತ್ವದ ಘಟನೆಗಳ ಬಗೆಗಿನ ಸ್ವಾರಸ್ಯಪೂರ್ಣ ನಿರೂಪಣೆಗಳನ್ನು ಅವುಗಳಲ್ಲಿ ಕಾಣಬಹುದು. ಮೂರ್ತಿರಾಯರ ಪತ್ರ ಸಂಕಲನ, ಅವರ ಮತ್ತು ತೀ.ನಂ.ಶ್ರೀ ಅವರ ನಡುವೆ ಆತ್ಮೀಯ ಸಂಬಂಧದ ವಿದ್ವತ್ಪೂರ್ಣ ಸಂವಾದದ ಅನೇಕ ಆಯಾಮಗಳನ್ನು ತೆರೆದು ತೋರುತ್ತಿದೆ.”[2]

ಇತ್ತೀಚಿನ ವರ್ಷಗಳಲ್ಲಿ ಕನ್ನಡದಲ್ಲಿ ಪತ್ರ ಸಾಹಿತ್ಯ ಕುರಿತ ಪುಸ್ತಕ ಪ್ರಕಟಿಸಿದವರಲ್ಲಿ ಚಂದ್ರಯ್ಯನಾಯ್ಡು ಕೂಡ ಒಬ್ಬರು. ಅವರ ‘ಪತ್ರಗಳು-ಚಿತ್ರಗಳು’ ಮಾಲಿಕೆಯ ಮೂರು ಕೃತಿಗಳು ವಿಭಿನ್ನ ಮತ್ತು ವಿಶಿಷ್ಟ ಮಾದರಿಯವಾಗಿವೆ. ಪತ್ರ ಸಾಹಿತ್ಯದ ಬಗ್ಗೆ ಕುತೂಹಲಿಗಳಾಗಿದ್ದ ನಾಯ್ಡು ಅವರು ಪತ್ರ ವ್ಯವಹಾರವನ್ನು ಹವ್ಯಾಸವನ್ನಾಗಿ ಮಾಡಿಕೊಂಡಿದ್ದರು. ಅವರೇ ಹೇಳಿಕೊಂಡಿರುವಂತೆ “ನಾಡಿನ ಹಿರಿಯ ಸಾಹಿತಿಗಳು, ಕಲಾವಿದರು, ಮಠಾಧೀಶರ ಕೈ ಬರಹದ ಐದು ನೂರು ಪತ್ರಗಳು ನನ್ನಲ್ಲಿವೆ. ಅವುಗಳನ್ನು ಅತ್ಯಂತ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇನೆ. ನಮ್ಮ ‘ವಾಣಿ ಚಂದ್ರ ಗ್ರಂಥಾಲಯ’ದಲ್ಲಿ ಅವುಗಳಿಗೆ ವಿಶೇಷ ಸ್ಥಾನವಿದೆ.”[3] ನಾಯ್ಡು ಅವರ ಈ ಮಾತುಗಳಿಗೆ ಸಾಕ್ಷಿಯಾಗಿ ಮೂರು ಪುಟ್ಟ ಕೃತಿಗಳು ಹೊರಬಂದಿವೆ. ಸುಮಾರು ೧೯೮೩ರಿಂದ ತಮ್ಮ ವಿದ್ಯಾಗುರುಗಳಾದ ಡಾ. ಹಾಮಾನಾ, ಡಾ. ದೇಜಗೌ ಮತ್ತು ಡಾ.ಸಿ.ಪಿ.ಕೆ ಅವರು ನಾಯ್ಡು ಅವರಿಗೆ ಬರೆದ ಕೈಬರಹದ ಪತ್ರಗಳನ್ನು ಸಂಗ್ರಹಿಸಿ, ಯಥಾವತ್ತಾಗಿ ಪುಸ್ತಕ ರೂಪದಲ್ಲಿ ಓದುಗರಿಗೆ ನೀಡಿದ್ದಾರೆ. ೨೦೧೦ರಲ್ಲಿ ಪ್ರಕಟವಾಗಿರುವ ‘ಹಾಮಾನಾ ಪತ್ರಗಳು-ಚಿತ್ರಗಳು’, ‘ದೇಜಗೌ ಪತ್ರಗಳು-ಚಿತ್ರಗಳು’ ಮತ್ತು ‘ಸಿಪಿಕೆ ಪತ್ರಗಳು-ಚಿತ್ರಗಳು’, ಈ ಮೂರು ಕೃತಿಗಳು ಪತ್ರಗಳೊಂದಿಗೆ ಚಿತ್ರಗಳನ್ನೂ ಹೊಂದಿವೆ. ಪತ್ರಗಳನ್ನು ಸಾಹಿತ್ಯದ ಭಾಗವಾಗಿಯೇ ನೋಡುವ, ಅವುಗಳ ಸಾಂಸ್ಕೃತಿಕ ಮಹತ್ವವನ್ನು ಮುಂದಿನ ತಲೆಮಾರಿಗೆ ಜೋಪಾನವಾಗಿ ಕಾಯ್ದಿರಿಸುವ ಕೆಲಸವನ್ನು ನಾಯ್ಡು ಅವರು ಮಾಡಿದ್ದಾರೆ. ಕೈ ಬರಹದ ಪತ್ರಗಳು ಕಣ್ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ನಾಯ್ಡು ಅವರ ಕೃತಿಗಳು ಕೈ ಬರಹಗಳ ಮಹತ್ವ, ಪತ್ರದ ಶೈಲಿ, ಬರೆಯುವವರ ಮನೋಭಾವ, ಚಿಕ್ಕ ಚಿಕ್ಕ ವಿಷಯ ಸಂಗ್ರಹ, ಒಂದೆರಡು ಪುಟಗಳಲ್ಲಿ ಹೇಳುವ ವಿವರಗಳನ್ನು ಐದಾರು ಸಾಲುಗಳಲ್ಲಿ ಅಥವಾ ಒಂದು ಅಂಚೆ ಕಾರ್ಡಿನಲ್ಲಿ ಹೇಳುವ ರೀತಿ ಓದುಗರನ್ನು ಆಕರ್ಷಿಸುತ್ತದೆ. ಪತ್ರಗಳಲ್ಲಿನ ಆತ್ಮೀಯತೆ, ಮಾರ್ಗದರ್ಶನ, ಚಿಂತನೆ, ಉಭಯ ಕುಶಲೋಪರಿಗಳನ್ನು ಒಂದು ದಾಖಲೆಯಾಗಿಸಿ ಕಟ್ಟಿಕೊಡಲು ನಾಯ್ಡು ಪ್ರಯತ್ನಿಸಿದ್ದಾರೆ.

ಅಂಕಣ ಸಾಹಿತ್ಯದಿಂದಲೇ ಬರವಣಿಗೆಯನ್ನು ಪ್ರಾರಂಭಿಸಿದ ನಾಯ್ಡು ಅವರು ಚಿಕ್ಕಮಗಳೂರು ಜಿಲ್ಲೆಯ ಅನೇಕ ಅಪರಿಚಿತ ಸಾಧಕರುಗಳನ್ನು ಪರಿಚಯಿಸುವ ಕೆಲಸ ಮಾಡಿದವರು. ಅದು ಹಾಮಾನಾ ಅವರ ಗಮನ ಸೆಳೆದಿದೆ.“ನಿಮ್ಮ ಲೇಖನಗಳ ಮೇಲೆ ಕಣ್ಣಾಡಿಸಿದ್ದೇನೆ. ಅಷ್ಟಾಗಿ ಪರಿಚಿತರಲ್ಲದ ವ್ಯಕ್ತಿಗಳನ್ನು ಜನರಿಗೆ ಪರಿಚಯಿಸುವುದು ದೊಡ್ಡ ಕೆಲಸವೆಂದೇ ನನ್ನ ಭಾವನೆ. ಅವನ್ನು ಓದಿ ನಾನು ಸಂತೋಷಿಸಿದ್ದೇನೆ.....”[3] ಎಂದು ಹಾಮಾನಾ ಪತ್ರ ಬರೆದಿದ್ದಾರೆ. ಇಂಥ ಪತ್ರಗಳು ನಾಯ್ಡು ಅವರ ಬರವಣಿಗೆಗೆ ಸ್ಫೂರ್ತಿಯಾಗಿವೆ. ಮತ್ತಷ್ಟು ಅಪರಿಚಿತ ಸಾಧಕರನ್ನು ಹುಡುಕಿಕೊಂಡು ಹೋಗಲು ಹಾಮಾನಾ ಪತ್ರಗಳು ಪ್ರೇರಣೆ ನೀಡಿವೆ. ಇದರ ಫಲವಾಗಿ ಸಹ್ಯಾದ್ರಿ ಸಾಲು, ದೀಪಸ್ತಂಭಗಳು, ಪ್ರಾತಃಸ್ಮರಣೀಯರು ಮೊದಲಾದ ಕೃತಿಗಳು ನಾಯ್ಡು ಅವರ ಲೇಖನಿಯಿಂದ ಮೂಡಿಬಂದಿವೆ.

ಇಲ್ಲಿಯ ಪತ್ರಗಳು ಉಭಯ ಕುಶಲೋಪರಿ, ಮಾಹಿತಿ ವಿನಿಮಯಕ್ಕೆ ಸೀಮಿತವಾಗದೆ ನಾಯ್ಡು ಅವರ ನಾಡು-ನುಡಿ ಸೇವೆಯ ಮೇಲೆ ಬೆಳಕು ಬೀರಿವೆ. “ನಿಮ್ಮ ಕನ್ನಡ ಪ್ರೇಮಕ್ಕೆ ನಾನಂತು ಮಾರುಹೋಗಿದ್ದೇನೆ. ನಿಮ್ಮ ಸಾಹಿತ್ಯ ಕೃಷಿಯೂ ಸಾಮಾನ್ಯವೇನಲ್ಲ. ನೀವು ಪಡೆದಿರುವ ಪ್ರಶಸ್ತಿಗಳ ಪೂರ ಯಾರನ್ನಾದರೂ ದಿಗ್ಭ್ರಮೆಗೊಳಿಸುವಂಥದು. ನಿಮ್ಮಂಥ ವಾಗ್ಮಿಗಳು ಕನ್ನಡ ರಥದ ಸಾರಥ್ಯವನ್ನು ವಹಿಸಿಕೊಳ್ಳುವುದಾದರೆ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದೊರೆಯುವಲ್ಲಿ ಅಡ್ಡಿಯಿಲ್ಲ. ನಮ್ಮ ಕಾಲದಲ್ಲಿ ಕನ್ನಡ ಅಧ್ಯಾಪಕರು ಹೆಚ್ಚಿರಲಿಲ್ಲ. ಈಗ ಸಾವಿರಾರು ಮಂದಿ ಇದ್ದಾರೆ. ಎಲ್ಲರೂ ಮನಸ್ಸು ಮಾಡಿದರೆ ಕೆಲವೇ ದಿನಗಳಲ್ಲಿ ಕನ್ನಡವನ್ನು ಸರ್ವಮಾಧ್ಯಮವಾಗುವಂತೆ ಮಾಡಬಹುದು. ಈ ಬಗ್ಗೆ ಯೋಚಿಸಿ”[4] ಎಂದು ದೇಜಗೌ ಪತ್ರವೊಂದರಲ್ಲಿ ನಾಯ್ಡು ಅವರಿಗೆ ಬರೆಯುತ್ತಾರೆ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಕನ್ನಡಭಾಷೆಗೆ ಅಗ್ರಮಾನ್ಯ ಸ್ಥಾನಮಾನಗಳನ್ನು ತಂದುಕೊಡಲು ನಿರಂತರವಾಗಿ ಶ್ರಮಿಸಿದವರಲ್ಲಿ ದೇಜಗೌ ಕೂಡ ಒಬ್ಬರು. ಇವರು ನಾಯ್ಡು ಸೇರಿದಂತೆ ಅನೇಕ ಕನ್ನಡ ಭಾಷಾಭಿಮಾನಿ ಅಧ್ಯಾಪಕರು, ವಿದ್ಯಾರ್ಥಿಗಳು, ಸಂಘಸಂಸ್ಥೆಗಳ ಹೋರಾಟಗಾರರಿಗೆ ಪ್ರೇರಣೆ ನೀಡಿದ್ದಾರೆ. ನಾಯ್ಡು ಅವರ ಕನ್ನಡದ ಕೆಲಸವನ್ನು ಮೆಚ್ಚಿ ಬೆನ್ನು ತಟ್ಟುತ್ತಿದ್ದ ದೇಜಗೌ ಅವರು ನಾಯ್ಡು ಅವರಿಗೆ ಪ್ರೇರಕರಾಗಿ, ಪೋಷಕರಾಗಿ ಗಮನ ಸೆಳೆಯುತ್ತಾರೆ.

ದೇಜಗೌ ಅವರ ವ್ಯಕ್ತಿತ್ವವನ್ನು ಅರಿಯಲು ಅವರ ಪತ್ರಗಳು ಸಹಕಾರಿಯಾಗಿವೆ. ಇಲ್ಲಿಯ ಪತ್ರಗಳು ಕೇವಲ ಸಂವಹನಕ್ಕೆ ಸೀಮಿತವಾಗಿಲ್ಲ. ದೇಜಗೌ ಅವರ ಸರಳತೆ, ಪ್ರಾಮಾಣಿಕ ಬದುಕು, ಉಪಕಾರ ಸ್ಮರಣೆ, ನಾಡುನುಡಿ ಕಾಳಜಿ ಪತ್ರಗಳಲ್ಲಿ ಅನಾವರಣಗೊಂಡಿವೆ. ನಾಯ್ಡು ಅವರು ಆಹ್ವಾನಿಸಿದ್ದ ಸಮಾರಂಭದಲ್ಲಿ ಭಾಗವಹಿಸಿ ಮೈಸೂರಿಗೆ ಹಿಂದಿರುಗಿದ ದೇಜಗೌ ಪತ್ರವೊಂದರಲ್ಲಿ “ನೀವು ನನಗೆ ಕಾರಿಗೆಂದು ೧೫೦೦/-ರೂ ಕೊಟ್ಟಿದ್ದೀರಿ ಅದರಲ್ಲಿ ೧೨೪೫/- ರೂ ಅನ್ನು ಕಾರಿನವನಿಗೆ ಕೊಟ್ಟು, ಇನ್ನೂರೈವತ್ತೈದು ಉಳಿದಿತ್ತು. ಅದನ್ನು ಕುವೆಂಪು ಸ್ಮಾರಕ ನಿಧಿಗೆ ಜಮಾ ಮಾಡಿ ಸಂಬಂಧಿಸಿದ ರಶೀದಿಯನ್ನು ಇದರೊಂದಿಗೆ ಕಳುಹಿಸುತ್ತಿದ್ದೇನೆ”[5] ಎಂದು ಬರೆಯುತ್ತಾರೆ. ಈ ಕೃತಿಯಲ್ಲಿರುವ ಪತ್ರಗಳಲ್ಲಿ ಇಂಥ ಹತ್ತಾರು ಮಾಹಿತಿಗಳಿದ್ದು ದೇಜಗೌ ಅವರ ಶಿಸ್ತುಬದ್ಧ ಜೀವನವನ್ನು ತೆರೆದಿಟ್ಟಿವೆ.

ಕನ್ನಡದ ಹೆಸರಾಂತ ವಿದ್ವಾಂಸರಾದ ಡಾ.ಸಿ.ಪಿ.ಕೃಷ್ಣಕುಮಾರ್ ಅವರು ನಾಯ್ಡು ಅವರಿಗೆ ಬರೆದ ಮುವತ್ತೆರಡು ಪತ್ರಗಳ ಗುಚ್ಛ ‘ಸಿಪಿಕೆ ಪತ್ರಗಳು ಚಿತ್ರಗಳು’.ಸಿಪಿಕೆ ಅವರು ಬರೆದಿರುವ ಬಹುತೇಕ ಪತ್ರಗಳು ಅಂಚೆಕಾರ್ಡಿನಲ್ಲಿವೆ. ಹಾಗಾಗಿ ಇವು ಸುಧೀರ್ಘ ಪತ್ರಗಳಲ್ಲದಿದ್ದರೂ ಹೇಳಬೇಕಾದ ವಿಷಯವನ್ನು ಸಂಕ್ಷಿಪ್ತವಾಗಿ ಪರಿಣಾಮಕಾರಿಯಾಗಿ ಹೇಳಿರುವ ಜಾಣ್ಮೆಯನ್ನು ಕಾಣಬಹುದು. ಇಲ್ಲಿಯ ಪತ್ರಗಳು ಕೇವಲ ಕ್ಷೇಮ ಸಮಾಚಾರಕ್ಕೆ ಮೀಸಲಾಗದೆ ನಾಯ್ಡು ಅವರ ಸಾಹಿತ್ಯ ಕೃಷಿಯ ವಿಮರ್ಶೆಗಳೂ ಆಗಿವೆ. ನಾಯ್ಡು ಅವರ ಆಶಯಕ್ಕೆ ತಕ್ಕಂತೆ ಗುರುಗಳು ಪ್ರತಿಕ್ರಿಯಿಸಿರುವ ಅನೇಕ ಪತ್ರಗಳು ಇಲ್ಲಿವೆ. ನಾಯ್ಡು ಅವರು ಪ್ರಕಟಿಸಿದ್ದ ಕನ್ನಡ ಕಾರಂಜಿ ಕೃತಿಗೆ ಸಿಪಿಕೆ ಪತ್ರದಲ್ಲಿ ಪ್ರತಿಕ್ರಿಯೆ ನೀಡಿರುತ್ತಾರೆ.“ಪುಸ್ತಕ ಸಕಾಲಿಕವೂ ಸಮುಚಿತವೂ ಆಗಿದೆ. ಸುಲಭ ಲಭ್ಯವಲ್ಲದ ಹಿರಿಯರ

ಹಲವು ಹೇಳಿಕೆಗಳನ್ನು ಒಂದೆಡೆ ತಂದಿರುವುದು ಉಪಯುಕ್ತ. ಅಭಿನಂದನೆಗಳು. ಆದರೆ ಅವಸರದಿಂದಲೋ ಏನೋ ಕೆಲಸ ವ್ಯವಸ್ಥಿತವಾಗಿ ನಡೆದಿಲ್ಲ. ಇದು ಇನ್ನೂ ವ್ಯಾಪಕವಾಗುವುದು ಸಾಧ್ಯ ನೀವೇ ಹೇಳಿರುವಂತೆ. ಆದ್ದರಿಂದ ಇದರ ಪರಿಷ್ಕೃತ ವಿಸ್ತರಣವನ್ನು ನಿರೀಕ್ಷಿಸೋಣ."[೬] ಸಿ.ಪಿ.ಕೆ ಅವರ ಈ ಪತ್ರವಿರುವುದು ಅಂಚೆ ಕಾರ್ಡಿನಲ್ಲಿ. ಬರೆದಿರುವುದು ನಾಲ್ಕು ಸಾಲು. ಆದರೆ ಹೇಳಿರುವುದು ಇಡೀ ಕೃತಿಯ ವಿಮರ್ಶೆ. ಲೇಖಕನನ್ನು ಮೆಚ್ಚಿಸುವುದು ವಿಮರ್ಶೆಯ ಉದ್ದೇಶವಲ್ಲ. ಲೇಖಕನ ಸರಿ ತಪ್ಪುಗಳನ್ನು ಗುರುತಿಸುವ ಕೃತಿನಿಷ್ಠ ಮೌಲ್ಯಮಾಪನ ಮಾಡುವ ಕೆಲಸವಾಗಬೇಕು.ನಾಯ್ಡು ಅವರ ಸಾಹಿತ್ಯ ಕೃಷಿ ಆರಂಭಿಕ ಹಂತದಲ್ಲಿ ಮಾಡಿದ ಕೆಲಸ ಕನ್ನಡ ಕಾರಂಜಿ. ಬಹುಷಃ ಇದು ಹೇಗಿರಬೇಕಿತ್ತು ಎನ್ನುವುದು ಸಿಪಿಕೆ ಪತ್ರದ ಉದ್ದೇಶವಾಗಿತ್ತು.

ನಾಯ್ಡು ಅವರು ತಮ್ಮ ಗೆಳೆಯ ಅಶೋಕ್ ಅವರು ಬರೆದ ಕವನಗಳನ್ನು ಸಿಪಿಕೆ ಅವರಿಗೆ ಕಳುಹಿಸಿಕೊಟ್ಟಾಗ ಸಿಪಿಕೆ ಅವರು ಅಂಚೆಕಾರ್ಡಿನನಲ್ಲಿ ನೀಡಿರುವ ಪ್ರತಿಕ್ರಿಯೆ ನಿಷ್ಠುರವಾದರೂ ಸತ್ಯವಾಗಿವೆ. "ಶ್ರೀ ಅಶೋಕ ಅವರ ಕವನಗಳನ್ನು ಓದಿದೆ. ತೀರ ಎಳಸು, ಮನ್ನುಡಿಯ ಭಾರವನ್ನು ಹೊರಲಾರವು. ಪ್ರಕಟಣೆಗೆ ಯೋಗ್ಯವಾಗಿಲ್ಲ. ಪ್ರಕಟಿಸಲಿ ಎನ್ನುವುದು ಅನ್ಯಾಯ ಮಾಡಿದಂತೆ. ಇನ್ನಷ್ಟು ಬೆಳೆಯಲಿ ಒಳ್ಳೆಯ ಕಾವ್ಯದ ಅನುಸಂಧಾನದಿಂದ ಮಾರ್ಗದರ್ಶನ ಪಡೆಯಲಿ. ನಿರಾಶೆ ಬೇಕಿಲ್ಲ, ಭರವಸೆ ಇರಲಿ, ಎಳಗರು ಎತ್ತಾಗದೆ?"[೭] ಎಂಬ ಮಾತುಗಳು ಕವಿಗಳಿಗೆ ಕಾವ್ಯ ರಚನೆಯ ಪಾಠವಾಗಿದೆ. ಸ್ವತಃ ನಾಯ್ಡು ಅವರೂ ಕವಿತೆಗಳನ್ನು ಬರೆದಿದ್ದು, ಕೆಲವು ಕವಿತೆಗಳ ಬಗ್ಗೆ ಸಿಪಿಕೆ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂಥ ಪತ್ರಗಳು ಯಾವುದೋ ಒಬ್ಬ ಕವಿಗಲ್ಲ, ಪ್ರತಿಯೊಬ್ಬ ಕವಿಯೂ ತನ್ನ ಕಾವ್ಯವನ್ನು ಮತ್ತೆಮತ್ತೆ ಅವಲೋಕಿಸಿ, ಅನುಸಂಧಾನ ಮಾಡಿ, ಗಟ್ಟಿಯಾದ ಸತ್ವಪೂರ್ಣವಾದ ಕಾವ್ಯಗುಣವನ್ನು ತುಂಬಿಕೊಡುವ ಕವಿತೆಗಳ ರಚನೆಗೆ ಪ್ರೇರಣೆ ನೀಡಿವೆ. ಪತ್ರಗಳ ಮೂಲಕ ಇಂಥ ಕೆಲಸ ಸ್ವಲ್ಪ ಕಷ್ಟ. ಆದರೂ ಸಿಪಿಕೆ ಪ್ರೀತಿಯಿಂದಲೇ ಎಲ್ಲವನ್ನೂ ಮಾಡುತ್ತಾ ಹೋಗಿದ್ದಾರೆ. ಸಾಹಿತ್ಯ, ಸಾಂಸ್ಕೃತಿಕ ಲೋಕದಲ್ಲಿ ಉತ್ತಮವಾದುದ್ದನ್ನು ಕಾಣುವ ಬಯಕೆ ಅವರದಾಗಿದೆ. ಅಧ್ಯಯನಶೀಲರಿಗೆ, ಕಾವ್ಯ ಕಟ್ಟುವವರಿಗೆ ಸಿಪಿಕೆ ನುಡಿಗಳು ಬೆಳಕಾಗಿವೆ.

ಕೈಬರಹದ ಪತ್ರಗಳು ಕಣ್ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ಸಾಮಾಜಿಕ ಜಾಲತಾಣಗಳ ವಿಸ್ತರಣೆಯ ನಡುವೆ ಕೈಬರಹದ ಪತ್ರಗಳು ಕಣ್ಮರೆಯಾಗದಂತೆ, ಮುಂದಿನ ಪೀಳಿಗೆಗೆ ಸಾಂಸ್ಕೃತಿಕ ದಾಖಲೆಯಾಗಿ ಉಳಿಸುವ ಅಗತ್ಯವಿದೆ. ಅಮೂಲ್ಯವಾದ ಕೆಲವು ಪತ್ರಗಳನ್ನು ಹಸ್ತಪ್ರತಿಯ ರೀತಿಯಲ್ಲಿ ಸಂರಕ್ಷಿಸಿರುವ ನಾಯ್ಡು ಅವರು "ಪತ್ರಗಳಿಗಿರುವ ಮಹತ್ವ ಮತ್ತು ಆತ್ಮೀಯತೆಯನ್ನು ಯಾರೂ ಎಂದೂ ಅಲ್ಲಗಳೆಯಲಾರರು. ಈ ಪತ್ರಗಳು ಸಾಂಸ್ಕೃತಿಕ ಮಹತ್ವವನ್ನು, ಸಾಹಿತ್ಯಿಕ ಗುಣಗಳನ್ನು, ಮಾನವೀಯ ಸಂಬಂಧಗಳನ್ನು, ಗುರು-ಶಿಷ್ಯರ ನಡುವಿನ ಸಂಬಂಧವನ್ನೂ ಸೂಸುತ್ತವೆ"[೮] ಎಂದು ಹೇಳಿಕೊಂಡಿದ್ದಾರೆ. ಇಲ್ಲಿ ಕೈಬರಹದ ಪತ್ರಗಳನ್ನು ಯಥಾವತ್ತಾಗಿ ಪ್ರಕಟಿಸುವ ಕಾರ್ಯವನ್ನು ನಾಯ್ಡು ಮಾಡಿದ್ದಾರೆ. ಕೈಬರಹಗಳ ಮಹತ್ವ, ಪತ್ರದ ಶೈಲಿ, ಬರೆಯುವವರ ಮನೋಭಾವ, ಚಿಕ್ಕ ಚೊಕ್ಕ ವಿಷಯ ಸಂಗ್ರಹ, ಒಂದೆರಡು ಪುಟಗಳಲ್ಲಿ ಹೇಳಬಹುದಾದ ವಿವರಗಳನ್ನು ಐದಾರು ಸಾಲುಗಳಲ್ಲಿ ಹೇಳುವ ರೀತಿ ಓದುಗರ ಮನಸ್ಸನ್ನು ಸೆಳೆಯುತ್ತದೆ.

ನಾಯ್ಡು ಅವರ ಕನ್ನಡದ ಕೆಲಸವೇ ವಿಭಿನ್ನ. ಒಂದೆಡೆ ಸಾಹಿತ್ಯ ಕೃಷಿ, ಮತ್ತೊಂದೆಡೆ ನಾಡುನುಡಿ ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಹಬ್ಬ, ಜಾತ್ರೆಗಳೋಪಾದಿಯಲ್ಲಿ ಆಯೋಜಿಸುವುದು. ನಾಯ್ಡು ಅವರ ಸಾಹಿತ್ಯವನ್ನು ನೋಡಿದಾಗ ಸೃಜನ ಶೀಲತೆಗೆ ನೀಡಿದಷ್ಟೇ ಮಹತ್ವವನ್ನು ಸಂಗ್ರಹಿತ ಸಂಗತಿಗಳಿಗೂ ನೀಡಿರುತ್ತಾರೆ. ಆಧುನಿಕ ಯುಗದಲ್ಲಿ ಹಲವು ಸಂವಹನ ಸಾಧನಗಳು ತ್ವರಿತ ಮತ್ತು ಪರಿಣಾಮಕಾರಿಯಾಗಿರುವಾಗ ಕುಶಲೋಪರಿಗಾಗಿ ಬರೆಯುತ್ತಿದ್ದ ಕೈಬರಹದ ಪತ್ರಗಳು ನೆಲೆ ಕಳೆದುಕೊಂಡಿವೆ. ಇಂಥ ದಿನಗಳಲ್ಲಿ ಕೈಬರಹದ ಪತ್ರಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವುದು ನಾಯ್ಡು ಅವರ ಉದ್ದೇಶವಾಗಿದೆ. ಪತ್ರದ ಸ್ವರೂಪ, ಬರೆಯುವ ಕ್ರಮ, ಪತ್ರದಲ್ಲಿ ತುಂಬಿರುವ ಪ್ರೀತಿ ವಿಶ್ವಾಸ, ಸಂಗ್ರಹಿತ ಮಾಹಿತಿ ಮುಂತಾದ ಸಂಗತಿಗಳು ಪ್ರತಿಯೊಬ್ಬರಿಗೂ ಮಾರ್ಗದರ್ಶಿಯಂತಿವೆ.

**ಕೊನೆ ಟಿಪ್ಪಣಿಗಳು**


1. ಸ. ಗಿರಿಜಾ ಶಂಕರ, ಮುನ್ನುಡಿ-ಸಿಪಿಕೆ ಪತ್ರಗಳು ಚಿತ್ರಗಳು-ಚಂದ್ರಯ್ಯನಾಯ್ಡು, ಪು ಸಂ-II (೨೦೧೦)
2. ಪ್ರಧಾನ್ ಗುರುದತ್ತ, ಮುನ್ನುಡಿ-ಹಾಮಾನಾ ಪತ್ರಗಳು ಚಿತ್ರಗಳು, ಚಂದ್ರಯ್ಯನಾಯ್ಡು, ಪು ಸಂ-೭ (೨೦೧೦)
3. ಚಂದ್ರಯ್ಯನಾಯ್ಡು, ಹಾಮಾನಾ ಪತ್ರಗಳು ಚಿತ್ರಗಳು, ಪು ಸಂ-೩೦(೨೦೧೦)
4. ಚಂದ್ರಯ್ಯನಾಯ್ಡು, ದೇಜಗೌ ಪತ್ರಗಳು ಚಿತ್ರಗಳು, ಪು ಸಂ-೧(೨೦೧೦)
5. ಚಂದ್ರಯ್ಯನಾಯ್ಡು, ದೇಜಗೌ ಪತ್ರಗಳು ಚಿತ್ರಗಳು, ಪು ಸಂ-೩(೨೦೧೦)
6. ಚಂದ್ರಯ್ಯನಾಯ್ಡು, ಸಿಪಿಕೆ ಪತ್ರಗಳು ಚಿತ್ರಗಳು, ಪು ಸಂ-೫(೨೦೧೦)
7. ಚಂದ್ರಯ್ಯನಾಯ್ಡು, ಸಿಪಿಕೆ ಪತ್ರಗಳು ಚಿತ್ರಗಳು, ಪು ಸಂ-೧೫(೨೦೧೦)
8. ಚಂದ್ರಯ್ಯನಾಯ್ಡು, ದೇಜಗೌ ಪತ್ರಗಳು ಚಿತ್ರಗಳು, ಪು ಸಂ-I (೨೦೧೦)